ನಿಯಮಗಳಿಗನುಸಾರವಾಗಿಯೇ ಪ್ರವೇಶ ಪಡೆಯಬಹುದೆಂದು ಅರಮನೆಯೊಂದು ಸಾರುತ್ತಿರುವ ಕ್ರಮವೇ ಅಲ್ಲಿನ ಕಲಾತ್ಮಕ ಸಂಗ್ರಹದ ಮೂಲಸತ್ವ.

ಕಲಾಕೃತಿ ಎಂದರೆ ಹೀಗೆಯೇ ಪ್ರದರ್ಶಿತವಾಗಬೇಕು ಎಂಬ ಸರ್ವಾನುಮತದ ಅಂತರರಾಷ್ಟ್ರೀಯ ಒಪ್ಪಂದವನ್ನು 'ವೈಟ್ ಕ್ಯೂಬ್' ಸಂಸ್ಕೃತಿ ಎನ್ನುತ್ತೇವೆ. ಎಲ್ಲ ಅರಮನೆಗಳಂತೆ ಮೈಸೂರು ಅರಮನೆಯೂ ಅದರ ಪೂರ್ವಸೂರಿಯ ಪಾತ್ರ ವಹಿಸುತ್ತದೆ. ರವಿವರ್ಮ, ಮೈಸೂರು ಸಾಂಪ್ರದಾಯಿಕ ಚಿತ್ರ, ಪಂಚಲೋಹಗಳ ವಿಗ್ರಹ, ಎಂಬ ವರ್ಗ ವ್ಯತ್ಯಾಸವಿಲ್ಲದೆ ಯಾವುದೇ ಚಿತ್ರವನ್ನು ನೋಡುತ್ತಿರುವಾಗಲೂ, ಸುತ್ತಲಿನ ವಾಸ್ತು ಹಾಗೂ ಇವೆಲ್ಲಾ ಅರಮನೆಯ ಅನಿವಾರ್ಯ ಭಾಗವೆಂಬ ಎಚ್ಚರ ಮಾತ್ರ ಮೈಸೂರಿನಲ್ಲಿ ಸದಾ ಇರುತ್ತದೆ. ವ್ಯಾಟಿಕನ್‌ನಲ್ಲಿ ಮೈಕೆಲೆಂಜೆಲೋವಿನ ಭಿತ್ತಿಚಿತ್ರವನ್ನು ವೀಕ್ಷಿಸುವಾಗಲೂ ಹೀಗೆಯೇ – 'ಇದೊಂದು ಗ್ರಂಥಾಲಯವಾಗಿತ್ತು, ಈಗಿಲ್ಲ' ಎಂಬ ಎಚ್ಚರಿಕೆಯಿಂದಲೇ ಆ ಚಿತ್ರಗಳನ್ನು ನೋಡುತ್ತಿರುತ್ತೇವೆ. ಅರಮನೆಯೊಳಗೆ ಆನೆಯನ್ನು ತಂದರೂ ಸಹ ಅದು ಅರಮನೆಯ ಆನೆಯಾಗಿರುತ್ತದೆಯೇ ಹೊರತು, ಆನೆಯನ್ನು ಸುತ್ತುವರಿದ ಮನೆಯಾಗಿರುವುದಿಲ್ಲ. ದಸರಾ ಉತ್ಸವವನ್ನು ಕೇಂದ್ರವನ್ನಾಗಿ ಮಾಡಿಕೊಂಡಿರುವ ಅರಮನೆಯೊಳಗಣ ಚಿತ್ರಗಳಿಗೆ ಅಂತಹ ಒಂದು ವ್ಯಕ್ತಿತ್ವವಿದೆ.



ನಾಲ್ವಡಿ ಕೃಷ್ಣರಾಜ್ ಒಡೆಯರ್ ಅವರ ಜೀವಂತಾಕಾರದ ಸ್ಟಕ್ಕೋ ಮಾಧ್ಯಮದ ಶಿಲ್ಪ

## ಕಲಾಶೈಲಿಗಳ ಸಹನಡಿಗೆ

ಮೈಸೂರು ಅರಮನೆಯಲ್ಲಿ ರವಿವರ್ಮನ 'ಜಟಾಯುವಧೆ' ಚಿತ್ರಗಳಂತಹವನ್ನು ನೋಡುವಾಗ, ಆ ಚಿತ್ರಗಳು ಅದಾಗಲೇ ಪೋಸ್ಟರುಗಳ ಮೂಲಕ ಪರಿಚಿತವಾಗಿರುತ್ತವೆ. 1890ರ ದಶಕದಲ್ಲಿ ಸ್ವತಃ ಮೈಸೂರಿಗೆ ಬಂದು ಕಲಾಕೃತಿಗಳನ್ನು ರಚಿಸಿದ್ದಾಗ ಕಲಾವಿದ ಕೆ. ವೆಂಕಟಪ್ಪನವರು ಆಗಿನ್ನೂ ಟೀನ್ ಏಜ್ ಹುಡುಗನಾಗಿದ್ದರು. ಇಂದು ಅರಮನೆಯ ಆವರಣವನ್ನೂ ಮರೆಯುವಂತೆ ಮಾಡಬಹುದಾದ ಅಲ್ಲಿನ ಏಕೈಕ ಕಲಾಕೃತಿಗಳ ಸಂಗ್ರಹವೆಂದರೆ ಅದು ವೆಂಕಟಪ್ಪನವರ ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದ ಉಬ್ಬುಗೆತ್ತನೆಗಳು. ಅರಮನೆಯಲ್ಲಿ ರವಿವರ್ಮನ ನೈಜತೆಯನ್ನು ವೆಂಕಟಪ್ಪನವರಿಗೆ ಕಲಿಸಿ, ಅದಕ್ಕೆ ತದ್ವಿರುದ್ಧವಾಗಿ ಕಲೆಯನ್ನು ಸೃಷ್ಟಿಸುತ್ತಿದ್ದ ಕೊಲ್ಕತ್ತ ಕಲಾಶಾಲೆಯಲ್ಲಿಯೂ ಅವರಿಗೆ ಶಿಕ್ಷಣ ಕೊಡಿಸಿ, ಇವೆರಡರ ಸಮ್ಮಿಶ್ರಣದ ಸೃಷ್ಟಿ ಮೈಸೂರಿನಲ್ಲಾಗಲಿ ಎಂಬ ಘನ ಉದ್ದೇಶವನ್ನು ಅರಮನೆ ಹೊಂದಿತ್ತು. ಈ ಉದ್ದೇಶದಲ್ಲಿ ಸಫಲವಾಯಿತು ಸಹ. ಭಾರತದ ಕಲಾಶೈಲಿಗಳ ವಿಂಗಡಣೆಗೆ ಇಲ್ಲಿ ಮನ್ನಣೆ ಏಕಿಲ್ಲವೆಂದರೆ, ಅವೆಲ್ಲವೂ ಇಲ್ಲಿ ಸಹಜೀವಿಗಳಾಗಿವೆಯೇ ಹೊರತು ವಿರೋಧಿಗಳಾಗಿಯಲ್ಲ. ಮೈಸೂರು, ತಂಜಾವೂರು ಸಾಂಪ್ರದಾಯಿಕ ಕಲೆ, ಜೆ.ಜೆ. ಕಲಾಶಾಲೆ, ಶಾಂತಿನಿಕೇತನ, ಚೋಳಮಂಡಲ, ಬರೋಡ ಕಲಾಶಾಲೆಗಳಂತಹ ಪ್ರಮುಖ ಶೈಲಿಗಳ ಕೃತಿಗಳೆಲ್ಲವೂ ಒಂದೆಡೆ ಭಾರತದಲ್ಲಿ ಕಾಣಸಿಗುವುದಾದರೆ, ಅದು ಮೈಸೂರು ಅರಮನೆಯಲ್ಲಿ ಮಾತ್ರವೇ!

ಇದನ್ನು ಚೆನ್ನಾಗಿ ಅರಿತಿದ್ದ ಕಲಾವಿದ ಕೆ. ವೆಂಕಟಪ್ಪನವರು ಅರಮನೆಯ ಪ್ರಾಯೋಜಿತ ಕಲಾಯೋಜನೆಗಳನ್ನು ಪೂರೈಸಲು ಒಪ್ಪಿದ್ದರೇ ಹೊರತು 'ಅರಮನೆ –ಕಲಾವಿದರು' ಎಂದೇ ಖ್ಯಾತವಾಗಿದ್ದ, ಆದರೆ ಬಹಳ ಶ್ರಮವನ್ನು ಬೇಡುತ್ತಿದ್ದ, ಕಲೆ-–ಕುಶಲಕಲೆಗಳ ವ್ಯತ್ಯಾಸಕ್ಕೆ ಮನ್ನಣೆ ನೀಡದ ವೃತ್ತಿಗೆ ತಮ್ಮನ್ನು ಒಡ್ಡಿಕೊಂಡಿರಲಿಲ್ಲ. 20ನೇ ಶತಮಾನದಾದ್ಯಂತ ಮೈಸೂರು ಅರಮನೆಯ ಕಲಾವಿದರ ಪಟ್ಟಿ ಬಹಳ ದೊಡ್ಡದಿದೆ. ಅರಮನೆಯೊಳಗಿನ ಡಿಸ್ಪೆಂಸರಿಯನ್ನೇ ಸ್ಟುಡಿಯೋ ಮಾಡಿಕೊಂಡಿದ್ದ ವೆಂಕಟಪ್ಪನವರು ಅರಮನೆ– ಕಲಾವಿದರ ತಿಂಗಳ ಸಂಬಳ ಪಡೆವ ಅವಕಾಶವನ್ನು ಮಾತ್ರ ಕೊನೆಯವರೆಗೂ ನಿರಾಕರಿಸುತ್ತಲೇ ಬಂದರು. ತನ್ನನ್ನು ಪ್ರತಿರೋಧಿಸುವ ಕಲಾವಿದರನ್ನೂ ಒಳಗೊಳ್ಳುವ ದೃಶ್ಯವೈಶಾಲ್ಯ ಮೈಸೂರು ಅರಮನೆಗಿತ್ತು. ಅಂದರೆ ಈ ಅರಮನೆಯು ಕೇವಲ ಕೃತಿಗಳನ್ನು ಶೇಖರಿಸದೆ, ಕಲಾವಿದರ ಸ್ವತಂತ್ರ ಮನೋಭಾವಕ್ಕೂ ಪ್ರಾಯೋಗಿಕ ಆಸ್ಪದ ನೀಡಿದ ತಾಣವಾಗಿಯೂ ಇಂದು ನಮಗೆ ಮುಖ್ಯವಾಗುತ್ತದೆ. ಚಿತ್ರದುರ್ಗದ ಇತಿಹಾಸವನ್ನು ಹಾಡುವ 'ನಾಗರಹಾವು' ಸಿನಿಮಾದ ರಾಮಾಚಾರಿ ಅಭಿನಯಿಸಿದ್ದು ಇದೇ ದುರ್ಗದಲ್ಲೇ ಎಂದು ಈಗಿನ ಗೈಡ್‌ಗಳ ಉಪಕಥನಗಳಂತೆ ಇದು. ಇಂತಹ ಬಹುಮುಖಿ ನೆಲೆ ಅರಮನೆಯ ಕಲಾತ್ಮಕ ವ್ಯಕ್ತಿತ್ವಕ್ಕೆ ಇದೆ.

ವೈಪರೀತ್ಯವೆಂದರೆ, ಮೈಸೂರು ಅರಮನೆಯನ್ನು ತೊರೆದ ಏಕೈಕ ಕಲಾವಿದನ (1940) ಹೆಸರಿನಲ್ಲಿ, ಕರ್ನಾಟಕ ರಾಜ್ಯದ ಏಕೈಕ ಆಧುನಿಕ ಕಲಾಸಂಗ್ರಹಾಲಯ ಮತ್ತು ಭಾರತದಲ್ಲೇ ಅನನ್ಯವಾಗಿ, ಬೆಂಗಳೂರಿನಲ್ಲಿ 1974ರಲ್ಲಿ ಸ್ಥಾಪಿತವಾದುದು 'ವರ್ಣಶಿಲ್ಪಿ ಕೆ. ವೆಂಕಟಪ್ಪ ಚಿತ್ರಶಾಲೆ' ಅಥವ ಸಂಗ್ರಹಾಲಯ. ಅರಮನೆಯ ಕಲಾಸಂಗ್ರಹದ ಸೃಷ್ಟಿಯ ಹಿಂದೆ ಇಂತಹ ಹಲವು ಕಥನಗಳ ಮಾಲೆಯೇ ಇದೆ. 1890ರ ದಶಕದಲ್ಲಿ ತಿಂಗಳಿಗೆ ಹತ್ತು ರೂಪಾಯಿ ಸಂಪಾದಿಸುತ್ತಿದ್ದ ಅರಮನೆ –ಕಲಾವಿದ ಕೆ. ಕೇಶವಯ್ಯನವರು, 1930ರ ದಶಕದಲ್ಲಿ 30 ರೂಪಾಯಿಗಳನ್ನು ಸಂಪಾದಿಸುವ ಹಂತಕ್ಕೇರಿದ್ದರಷ್ಟೇ. ಕಲೆಯನ್ನು ಔಪಚಾರಿಕವಾಗಿ ಎಲ್ಲಿಯೂ ಕಲಿಯದ ಉತ್ತರ ಭಾರತದ ಶಿಲ್ಪಿಯೊಬ್ಬರು ದಿನಕ್ಕೆ ಎರಡು ರೂಗಳನ್ನು ಅರಮನೆಯಲ್ಲಿ ಸಂಪಾದಿಸುತ್ತಿದ್ದರು. ಸಂಬಳ ಸಾಲದ್ದರಿಂದಾಗಿ ಕೇಶವಯ್ಯನವರು